**<u>ಸಾಕ್ಷಿಯನ್ನು ದಿಃ 03.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ವಿ.ಎಸ್ ವಕೀಲರಿಂದಃ-</u>**

ವಾದಿ ಮೈನರ್ ಇರುವ ಕಾರಣ ಅವರನ್ನು ಪ್ರತಿನಿಧಿಸುವ ಬಗ್ಗೆ ಯಾರು ಅರ್ಜಿ ಹಾಕಿಲ್ಲ ಎಂದು ವಕೀಲರು ತಿಳಿಸಿದ್ದರು. ಅವರು ಪೂರ್ಣ ವಿಚಾರ ತಿಳಿದು ನನಗೆ ಹೇಳಿದ್ದರು. ನಾನು ನಮ್ಮ ಮಕ್ಕಳ ಮದುವೆ ಮಾಡುವ ಕಾಲಕ್ಕೆ ಅಂದಾಜು ಎಷ್ಟು ಖರ್ಚು ಮಾಡಿರುತ್ತೇನೆ ಎಂದು ನನಗೆ ಈಗ ಜ್ಞಾಪಕ ಇಲ್ಲ. ಐಟಂ ನಂ. 1 ಮತ್ತು 2 ರ ಸ್ವತ್ತನ್ನು 3 ಸಾವಿರ ರೂ. ಗಳಿಗೆ ಖರೀದಿ ಮಾಡಿರುತ್ತೇನೆ. ಒಟ್ಟು ಕುಟುಂಬದ ಸ್ವತ್ತುಗಳಲ್ಲಿ ಎಷ್ಟು ಅದಾಯ ಬರುತ್ತಿತ್ತು ಎಂದು ಇದುವರೆಗೂ ಯಾವುದೆ ಅಕೌಂಟ್ಸ್ ಬರೆದು ಇಟ್ಟಿರುವುದಿಲ್ಲ. ಮಕ್ಕಳು ಜೀವನೋಪಾಯಕ್ಕೆ ಏನು ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ.

ಮಗ ನನ್ನ ಜೊತೆಯಲ್ಲಿ ವಾಸ ಇದ್ದಾನೆ. ಸೊಸೆ ಎಲ್ಲಿದ್ದಾಳೆ ಎಂದು ನನಗೆ ಗೊತ್ತಿಲ್ಲ. ಸೊಸೆಯ ಹೆಸರು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಕೂತಿರುವ ವಾದಿಯ ತಾಯಿಯನ್ನು ನೋಡಿ ಗುರುತಿಸಿರುವುದಿಲ್ಲ. ನನ್ನ ಮಗನಿಗೂ ವಾದಿಯ ತಾಯಿಗೂ ಸಂಬಂಧ ಸರಿ ಇಲ್ಲ ಎಂದರೆ ಸಾಕ್ಷಿ ಡಿವೋರ್ಸ ಆಗಿದೆ ಎನ್ನುತ್ತಾರೆ. ಮದುವೆ ಸರ್ಟಿಫಿಕೇಟ್ ನ ಮಗ ಹರೀಶ್ ಮತ್ತು ಅವರ ಹೆಂಡತಿ ವಿವಾಹದ ರಿಜಿಸ್ಟ್ರೇಶನ್ ಸರ್ಟಿಫಿಕೇಟ್ ಅನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ. 31** ಎಂದು ಗುರುತಿಸಲಾಯಿತು. ಮಗನಿಗೆ ಡಿವೋರ್ಸ ಆದ ಬಗ್ಗೆ ಆತ ಆದೇಶದ ಪ್ರತಿಯನ್ನು ತೋರಿಸಿ ಹೇಳಿದ್ದರಿಂದ ಗೋತ್ತಾಯಿತು. ಡಿವೋರ್ಸ ಯಾವಾಗ ಆಗಿದೆ ಎಂದು ನಗೆ ಗೊತ್ತಿಲ್ಲ. ಸದರಿ ಆದೇಶ ಹೈ ಕೋರ್ಟ ನಲ್ಲಿ ಸ್ಟೇ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಅಂತಹ ಹೈ ಕೋರ್ಟ ನಲ್ಲಿ ತಡೆಯಾಜ್ಞೆ ಇದ್ದು ಕೇಸ್ ನ ನೊಟೀಸು ನನ್ನ ಮಗ ಸ್ವೀಕರಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 2021-22 ನೇ

ಸಾಲಿನಲ್ಲಿ ಮಗ ಮತ್ತು ಸೊಸೆ ನಡುವೆ ಜಗಳ ಶುರುವಾಗಿರುತ್ತದೆ. ನನ್ನ ಮತ್ತು ನನ್ನ ಮಗನ ಸಂಬಂಧ ಚೆನ್ನಾಗಿರುತ್ತದೆ.

ದಾವಾ ಆಸ್ತಿಯನ್ನು ನನ್ನಿಂದ ಖರೀದಿಸಿದ್ದರು ಎಂದು ಹೇಳಿದ 7 ಮತ್ತು 8 ನೇ ಪ್ರತಿವಾದಿಗಳಾದ ಭೈರಪ್ಪ ಮತ್ತು ಸೌಮ್ಯ ರವರು ಖರೀದಿ ಮಾಡಿದಾಗಿನಿಂದ ಪರಿಚಯ ಇರುತ್ತಾರೆ. ಐಟಂ ನಂ. 1 ಮತ್ತು 2 ರನ್ನು ಯಾವ ಮೂಲದಿಂದ ಅದನ್ನು ಖರೀದಿಸಲಾಗಿದೆ ಎಂದು ದಾಖಲೆ ಇರುವುದಿಲ್ಲ. ಸಾಕ್ಷಿ ಪುನಃ ನನ್ನ ಸಂಬಂಳದ ಉಳಿತಾಯದ ಹಣದಿಂದ ಖರೀದಿಸಿದ್ದೆ ಎನ್ನುತ್ತಾರೆ. ಸಂಬಳದ ಹಣದಿಂದ ಎಷ್ಟು ಉಳಿತಾಯ ಮಾಡಿದ್ದೆ ಎಂದು ಯಾವುದೆ ದಾಖಲೆ ಇಲ್ಲ, ಸಾಲ ಸೋಲ ಮಾಡಿದ್ದೇನೆ ಎಂದು ತೋರಿಸಲು ಯಾವುದೆ ದಾಖಲೆ ಇಲ್ಲ.

ನನ್ನ ಮಗನ ಮತ್ತು ಸೊಸೆ ವೈವಾಹಿಕ ಸಂಬಂಧ ಜನವರಿ 2022 ರಲ್ಲಿ ಹದಗೆಟ್ಟಿತ್ತು ಎಂದರೆ ಇರಬಹುದು.ಅವರಿಬ್ಬರ ಸಂಬಂಧ ಕೆಟ್ಟಿದ್ದರಿಂದ ಇತರೆ ಮಕ್ಕಳೊಂದಿಗೆ ಸೇರಿ ದಾವಾ ಐಟಂ 1 ಮತ್ತು 2 ಅನ್ನು ಮಾರಾಟ ಮಾಡಿರುತ್ತೇನೆ ಎಂದು ಮೊದಲು ಹೌದು ಎಂದು ನುಡಿದು ನಂತರ ಸಂಬಂಧ ಹದಗೆಟ್ಟಿದ್ದರಿಂದ ಮಾರಾಟ ಮಾಡಿಲ್ಲ ಎನ್ನುತ್ತಾರೆ. ಈ ಕೇಸ್ ಹಾಕಿದ ನಂತರ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದೆ ಎಂದರೆ ಸರಿಯಲ್ಲ. ದಾವೆ ಹಾಕುವ ಮೊದಲೆ ಮಾರಾಟ ಮಾಡಿದ್ದೆ ಎನ್ನುತ್ತಾರೆ. ಜನವರಿ 2022 ರಲ್ಲಿ ಮಗನ ಮತ್ತು ಸೊಸೆಯ ನಡುವೆ ಜಗಳ ಆಗಿದ್ದರಿಂದ ಭಾಗ ಕೊಡಿ ಎಂದು ವಾದಿಯ ತಾಯಿ ನನಗೆ ಕೇಳಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮೊದಲಿನಿಂದಲೂ ನನ್ನ ಜೊತೆ ಇರುತ್ತಾನೆ ಎಂದರೆ ಸರಿಯಲ್ಲ. ಅವರಿಬ್ಬರ ನಡುವೆ ಜಗಳ ಅದ ಕಾರಣ ಭಾಗ ಕೇಳುತ್ತಾರೆ ಎಂದು ಗೊತ್ತಾಗಿ ಮಾರಾಟ ಮಾಡಿದ್ದೆ ಎಂದರೆ ಸರಿಯಲ್ಲ.

2023 ನೇ ಸಾಲಿನಿಂದ 2 ನೇ ಪ್ರತಿವಾದಿ ನನ್ನ ಬಳಿ ಇರುತ್ತಾನೆ. 2018 –19 ನೇ ಸಾಲಿನಲ್ಲಿ ನನ್ನ ಮಗ ಅಪಘಾತ ಪಡಿಸಿದ್ದ. 2009–10 ನೆ ಸಾಲಿನಿಂದಲೂ ನನ್ನ ಮಗ 2 ನೇ ಪ್ರತಿವಾದಿ ನನ್ನ ಜೊತೆ ಇರಲಿಲ್ಲ. ಮಗ ಅಪಘಾತ ಪಡಿಸಿದ್ದರಿಂದ ಪರಿಹಾರವನ್ನು ನಾನೆ ಕೊಟ್ಟಿದ್ದೇನೆ ಎಂದು ತೋರಿಸಲು ದಾಖಲೆ ಇರುವುದಿಲ್ಲ. ಈ ಪರಿಹಾರದ ವಿಚಾರವನ್ನು ನನ್ನ ಲಿಖಿತ ಹೇಳಿಕೆಯಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿ ವಕೀಲರ ಬಳಿ ಹೇಳಿದ್ದೆ ಎನ್ನುತ್ತಾರೆ. ನಾನು ಹಾಗೆ ಹೇಳಿದ್ದರೂ ತಕರಾರಿನಲ್ಲಿ ಬರೆದಿಲ್ಲವಾ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ದಾವಾ ಸ್ವತ್ತಗಳನ್ನು ಮಾರಾಟ ಮಾಡುವಾಗ ಕ್ರಯ ಪತ್ರಗಳಲ್ಲಿ ಸದರಿ ಪರಿಹಾರದ ಹಣದ ವಿಚಾರವಾಗಿ ಬರೆಯಲಾಗಿದೆ. ಅಪಘಾತದ ಪರಿಹಾರದ ಕೇಸ್ ಪಿರಿಯಾಪಟ್ಟಣದ ನ್ಯಾಯಾಲಯದಲ್ಲಿ ನಡೆದಿತ್ತು. ಸದರಿ ಕೇಸ್ 8 ಲಕ್ಷಕ್ಕೆ ರಾಜಿ ಆಗಿತ್ತು. ಸದರಿ ಕೇಸ್ 8 ಲಕ್ಷಕ್ಕೆ ರಾಜಿ ಆಗಿತ್ತು ಎಂದು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ನ್ಯಾಯಾಲಯದಲ್ಲ ಬರೆದಿರುವುದು 4 ಲಕ್ಷ ಆದರೆ ನಾವು ತೀರ್ಮಾನ ಮಾಡಿಕೊಂಡಿರುವುದು 8 ಲಕ್ಷ ಎನ್ನುತ್ತಾರೆ. ವಾದಿಗೆ ಭಾಗ ಕೊಡುವುದರಿಂದ ತಪ್ಪಿಸಿಕೊಳ್ಳಲು 8 ಲಕ್ಷ ರೂ. ಕೊಟ್ಟ ರಾಜಿ ಮಾಡಿಕೊಳ್ಳದಿದ್ದರೂ ಪ್ರತಿ ಹಂತದಲ್ಲಿ ಸುಳ್ಳು ಹೇಳಿಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ಮಗನು ಆತನ ಹೆಂಡತಿಯೊಂದಿಗೆ ಅನ್ಯೋನ್ಯತೆಯಿಂದ ಇಲ್ಲದ ಕಾರಣ ಆಕೆಯ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ 8 ಲಕ್ಷ ರೂ. ಹಣವನ್ನು ಪರಿಹಾರ ಕೇಸ್ ನಲ್ಲಿ ಕೊಟ್ಟಿದ್ದರೆ ಅದನ್ನು ಲಿಖಿತ ತಕರಾರಿನಲ್ಲಿ ನಮೂದಿಸುತ್ತಿದ್ದೆ ಎಂದರೆ ಸಾಕ್ಷಿ ನಮ್ಮ ವಕೀಲರಲ್ಲಿ ಹೇಳಿದ್ದೆ ಎನ್ನುತ್ತಾರೆ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಅವುಗಳನ್ನು ನಾವು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ

ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಯಲ್ಲಿ ವಾದಿಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ವಾದಿಗೆ ಆಸ್ತಿ ಕೊಡಬೇಕಾಗುತ್ತದೆ ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ತಾಯಿಯ ಜೊತೆ ಪ್ರತ್ಯೇಕವಾಗಿ ವಾಸ ಇದ್ದಾರೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.